**ದಿನಾಂಕಃ 20-01-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ** ಶ್ರೀ. ಎನ್.ಟಿ. ಹೆಚ್. ವಕೀಲರಿಂದ

1. ನಾನು ದ್ವಿತೀಯ ಪಿ.ಯು.ಸಿ. ವಿದ್ಯಾಭ್ಯಾಸ ಮಾಡಿರುತ್ತೇನೆ. ಕನ್ನಡ ಇಂಗ್ಲೀಷ ಓದಲು ಬರೆಯಲು ಬರುತ್ತದೆ. ನಾನು ಆಟೋ ಓಡಿಸುತ್ತೇನೆ. ನಂದಿನಿ ಡೈರಿ ಇದೆ. ಕಾಯಿ ವ್ಯಾಪಾರ ಮಾಡುತ್ತೇನೆ. ಈ ವಿಚಾರ ನೋಟೀಸ್ ಮತ್ತು ಕಂಪ್ಲೇಟ್ ನಲ್ಲಿ ಹೇಳಿಲ್ಲ. ನನಗೆ ತಿಂಗಳಿಗೆ ಎಲ್ಲಾ ಮೂಲಗಳಿಂದ 30 ಸಾವಿರ ಆದಾಯ ಇದೆ. ನಂದಿನಿ ಪಾರ್ಲರ್ ನಡೆಸಲು ಲೈಸನ್ಸ್ ಇದೆ. ನಾನು ತೆರಿಗೆ ಪಾವತಿದಾರನಲ್ಲ. ನನಗೆ ಬಿಪಿಎಲ್ ಪಡಿತರ ಚೀಟಿ ಇದೆ. ಮಾಸಿಕ 30 ಸಾವಿರ ಆದಾಯ ಇರುವ ಬಗ್ಗೆ ದಾಖಲಾತಿಗಳಿಲ್ಲ. ನನ್ನ ಕುಟುಂಬದಲ್ಲಿ ಬೇರೆ ಸದಸ್ಯರಿಗೆ ಆದಾಯ ಇಲ್ಲ. ನಾವು 5 ಜನ ಸದಸ್ಯರಿದ್ದೇವೆ. ಕುಟುಂಬದ ನಿರ್ವಾಹಣೆಯನ್ನು ನಾನೇ ಮಾಡುತ್ತೇನೆ ಎನ್ನುವುದು ಸರಿ.

2. ಆರೋಪಿ 10-15 ವರ್ಷಗಳಿಂದ ಪರಿಚಯ. ಆರೋಪಿಯು ಆಗಾಗ 5-10 ಸಾವಿರ ರೂ. ಪಡೆದುಕೊಂಡು ವಾಪಸ್ಸು ಕೊಡುತ್ತಿದ್ದರು. ಆ ರೀತಿಯಾಗಿ ಹಣ ಕೊಟ್ಟು ಪಡೆದ ದಿನಾಂಕವನ್ನು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಆರೋಪಿ ನನ್ನ ಬಗ್ಗೆ ವ್ಯವಹಾರ ಮಾಡುತ್ತಿರುವ ಬಗ್ಗೆ ದಾಖಲಾತಿಗಳು ಇಲ್ಲ. ಆರೋಪಿ ಸರ್ಕಾರಿ ನೌಕರರು ಎನ್ನುವುದು ಸರಿ. ಆರೋಪಿ ನನ್ನ ಬಳಿ ಯಾವುದೇ ಹಣ ಪಡೆದಿಲ್ಲ, ಯಾವುದೇ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಖಾತೆಯಲ್ಲಿ 7 ಲಕ್ಷ ಹಣ ಇರುವ ಬಗ್ಗೆ ದಾಖಲಾತಿ ಇದೆ. ಈ ಬಗ್ಗೆ ದಾಖಲಾತಿ ಹಾಜರು ಪಡಿಸಲು ತೊಂದರೆ ಇಲ್ಲ.

3. ಆಗಸ್ಟ್ 23 - 24 ರಂದು ಹಣ ಕೇಳಿರುತ್ತಾರೆ. ಆರೋಪಿ ನೇರ ನಮ್ಮ ಅಂಗಡಿ ಬಳಿ ಬಂದು ಕೇಳಿರುತ್ತಾರೆ. ಆ ದಿನ 23-08-2021 ರಂದು ಆರೋಪಿ ನನ್ನನ್ನು ಹಣ ಕೇಳಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಬೆಳ್ಳೂರು ಕ್ರಾಸ್‌ನಲ್ಲಿ ಮನೆ ಕಟ್ಟುತ್ತಿದ್ದು ಕೆಲಸುಗಾರರಿಗೆ ಕೂಲಿ ಕೊಡಬೇಕೆಂದು ಸಾಲ ಕೇಳಿದರು. ಆ ಮನೆಯನ್ನು ನಾನು ಹೊರಗಡೆಯಿಂದ ನೋಡಿರುತ್ತೇನೆ.

ಸದರಿ ಮನೆ ಗೃಹ ಪ್ರವೇಶ ದಿನಾಂಕ 24-05-2021 ರಂದು ಆಗಿತ್ತು ಎಂದು ಆಹ್ವಾನ ಪತ್ರಿಕೆ ತೋರಿಸಲಾಗಿ ಸಾಕ್ಷಿ ಒಪ್ಪಿರುತ್ತಾರೆ. ಸದರಿ ಪತ್ರಿಕೆಯನ್ನು ನಿಡಿ.1 ಎಂದು ಗುರುತಿಸಿರುತ್ತಾರೆ. ಆರೋಪಿ ಯಾವ ಬ್ಯಾಂಕಿನಿಂದ ಸಾಲ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮನೆ ಕಟ್ಟಿಸಲು ಹಣ ಕೇಳಿರುವುದು ಹಾಗೂ ಬ್ಯಾಂಕಿನಲ್ಲಿ ಸಾಲ ಪಡೆದು ಆರೋಪಿ ಹಣ ಹಿಂತಿರುಗಿಸುತ್ತೇನೆ ಎಂದು ಹೇಳಿರುತ್ತಾರೆ ಎಂದು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಸಮಾಯವಕಾಶ ಕೋರಿ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನಾಗಮಂಗಲ.

ಸಾಕ್ಷಿದಾರರ ಸಹಿಃ